# ತಿ.ನರಸೀಪುರ ತಾಲ್ಲೂಕಿನ
# ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ

(1996 ರಿಂದ ಜನವರಿ 2000ರ ವರೆಗೆ)

ಪ್ರಗತಿ ವರದಿ

ಕರುಣಾಟ್ರಸ್ಟ್, ತಿ.ನರಸೀಪುರಶಾಖೆ
ಹಳೇತಿರುಮಕೂಡಲು ತಿ.ನರಸೀಪುರ–571124
ಮೈಸೂರುಜಿಲ್ಲೆ
ಸಹಯೋಗ
ಡಾ.ನಾಗರಾಜು ಮತ್ತು ರೇಣುಕಾ ನಾಗರಾಜು ಫ್ಯಾಮಿಲಿಚಾರಿಟಬಲ್‌ಟ್ರಸ್ಟ್

ಕರುಣಾಟ್ರಸ್ಟ್ ತಿ.ನರಸೀಪುರಶಾಖೆ

ಸಹಯೋಗ

ಡಾ.ನಾಗರಾಜು ಮತ್ತು ರೇಣುಕಾನಾಗರಾಜುಫ್ಯಾಮಿಲಿ ಚಾರಿಟಬಲ್ಟ್ರಸ್ಟ್

ಹಳೇ ತಿರುಮಕೂಡಲು

ತಿರುಮಕೂಡಲು ನರಸೀಪುರ ತಾಲ್ಲೂಕು ವಿಭಜಿತ ಮೈಸೂರು ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಒಂದಾಗಿದ್ದು ಕರ್ನಾಟಕದ ಜೀವನದಿಯಾದ ಕಾವೇರಿ ಮತ್ತು ಕಪಿಲೆಯ ಸಂಗಮದ ಸ್ಥಳವಾಗಿದ್ದು ಅಂತರ್ಗಾಮಿನಿಯಾಗಿ ಸಂಗಮದಲ್ಲಿ ಸ್ಫಟಿಕ ಸರೋವರವು ಸೇರುವುದರಿಂದ ತ್ರಿವೇಣಿ ಸಂಗಮವಾಗಿದ್ದು ತಿರುಮಕೂಡಲು ಎಂದಾಗಿದೆ.

ಸಂಗಮದ ಎದುರಿನಲ್ಲಿ ಶ್ರೀಗುಂಜಾನರಸಿಂಹಸ್ವಾಮಿಯ ದೇವಸ್ಥಾನವಿರುವುದರಿಂದ ನರಸಿಂಹಪುರವೆಂದು ಕರೆಯಲ್ಪಡುತ್ತಿದ್ದು ನಂತರ ನರಸೀಪುರವಾಗಿದೆ. ಈ ಎರಡು ಹೆಸರುಗಳು ಸೇರಿ ತಿರುಮಕೂಡಲು ನರಸೀಪುರವೆಂದು ಕರೆಯಲ್ಪಡುತ್ತಿದೆ.

ತಾಲ್ಲೂಕಿನಲ್ಲಿ 132 ಮುಖ್ಯಗ್ರಾಮಗಳು 75 ದಾಖಲೆಗ್ರಾಮಗಳನ್ನು ಒಳಗೊಂಡಿದ್ದು 36 ಗ್ರಾಮಪಂಚಾಯ್ತಿಗಳಿವೆ 1 ಟೌನ್‌ಪಂಚಾಯ್ತಿ 1 ಟೌನ್ ಮುನಿಸಿಪಾಲಿಟಿಗಳಿವೆ. ಶೇ.60 ಭೂಭಾಗವು ನೀರಾವರಿ ಸೌಲಭ್ಯವನ್ನು ಒಳಗೊಂಡಿದ್ದು ತಾಲ್ಲೂಕಿನ ಮುಖ್ಯ ಕಸುಬು ವ್ಯವಸಾಯವಾಗಿರುತ್ತದೆ. ಬಹುಪಾಲು ಜನರು ಹರಿಜನ ಗಿರಿಜನ ಮತ್ತು ಹಿಂದುಳಿದ ಪಂಗಡಗಳಿಗೆ ಸೇರಿದ್ದು ಆರ್ಥಿಕವಾಗಿ ಹಿಂದುಳಿದವರಾಗಿರುತ್ತಾರೆ.

<u>ಸಂಸ್ಥೆಯ ಪ್ರಾರಂಭದ ಹಿನ್ನೆಲೆ:-</u>

ಕರುಣಾಟ್ರಸ್ಟ್ ಸಂಸ್ಥೆಯು 1988ರಲ್ಲಿ ಈಗಿನ ಚಾಮರಾಜನಗರ ಜಿಲ್ಲೆಯ ಯಳಂದೂರು ತಾಲ್ಲೂಕಿನಲ್ಲಿ ಸಮುದಾಯದ ಆರೋಗ್ಯ ಕಾರ್ಯಕ್ರಮಗಳಿಗಾಗಿ ಪರ್ಯಾಯ ನೋಬಲ್ ಪ್ರಶಸ್ತಿ ಪುರಸ್ಕೃತರಾದ ಡಾ.ಎಚ್.ಸುದರ್ಶನರವರು ಪ್ರಾರಂಭಿಸಿದರು. ಈ ಸಂಸ್ಥೆಯು ಬಿಳಿಗಿರಿರಂಗನ ಬೆಟ್ಟದ ವಿವೇಕಾನಂದ ಗಿರಿಜನಕಲ್ಯಾಣ ಕೇಂದ್ರಕ್ಕೆ ನೊಂದಾಯಿತ ಸಂಸ್ಥೆಯಾಗಿರುತ್ತದೆ. ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳಾದ ಕುಷ್ಠರೋಗ, ಮೂರ್ಛೆರೋಗ, ಕ್ಷಯ, ಮತ್ತು ಸಮುದಾಯ ಆಧಾರಿತ ದಂತಕಾಯಿಲೆ ಅಂಗವಿಕಲರ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಲಾಗುತ್ತಿದೆ.

ತಿ.ನರಸೀಪುರ ತಾಲ್ಲೂಕಿನಲ್ಲಿ 1996ರಿಂದ ಕರುಣಾಟ್ರಸ್ಟ್ ಸಂಸ್ಥೆಯು ಕಾರ್ಯ ಚಟುವಟಿಕೆಯನ್ನು ಅಮೇರಿಕಾದ ಪ್ರಿಂಟನಗರದ ನಿವಾಸಿಗಳಾದ ಡಾ. ಎಂ.ನಾಗರಾಜು ಮತ್ತು ಶ್ರೀಮತಿ ರೇಣುಕಾನಾಗರಾಜುರವರ ಉದಾರ ನೆರವಿನೊಂದಿಗೆ ಪ್ರಾರಂಭವಾಗಿದೆ. ಶ್ರೀಯುತ ಡಾ.ನಾಗರಾಜುರವರು ತಿ.ನರಸೀಪುರತಾಲ್ಲೂಕಿನ ಕೈಯಂಬಳ್ಳಿಗ್ರಾಮದ ದಿವಂಗತ ಮರಿಗೌಡರ ಪುತ್ರರಾಗಿರುತ್ತಾರೆ. ತಾಲ್ಲೂಕಿನ ಸಮಗ್ರಅಭಿವೃದ್ಧಿ, ಬಡಜನರ ಅಭಿವೃದ್ಧಿಗಾಗಿ ಮೂಲ ಗುರಿಯಾಗಿಟ್ಟುಕೊಂಡು ವೃತ್ತಿತರಬೇತಿಗಳನ್ನು ನೀಡುವುದು, ಶಿಕ್ಷಣ, ಸಮುದಾಯ ಸಂಘಟನೆ, ಮುಂತಾದ ಗುರಿಯನ್ನು ಹೊಂದಿರುತ್ತದೆ. ಇದಕ್ಕಾಗಿ ಡಾ.ನಾಗರಾಜು ಮತ್ತು ರೇಣುಕಾ ನಾಗರಾಜು ಫ್ಯಾಮಿಲಿ ಚಾರಿಟಬಲ್ಟ್ರಸ್ಟ್ ಸಂಸ್ಥೆಯನ್ನು ವಿವಿಧ ಕ್ಷೇತ್ರಗಳಲ್ಲಿ ದುಡಿದ ಮಹನೀಯರ ಮುಂದಾಳತ್ವದಲ್ಲಿ ಪ್ರಾರಂಭಿಸಿ ಕರುಣಾಟ್ರಸ್ಟ್‌ನ ಸಹಯೋಗದಲ್ಲಿ ಕಾರ್ಯನಿರ್ವಹಿಸಲಾಗುತ್ತಿದೆ.

ಆದಕ್ಕಾಗಿ –1996ಜನವರಿ ಹದಿನಾಲ್ಕರಂದು ತಿ·ನರಸೀಪುರ ವಿದ್ಯೋದಯ ಕಾಲೇಜಿನ ಸಭಾಂಗಣದಲ್ಲಿ ಚಿಂತಾಸಕ್ತರ ಸಭೆಯನ್ನು ನಡೆಸಿ ತಾಲ್ಲೂಕಿನ ಹಿರಿಯರ ಮತ್ತು ಪ್ರಗತಿಪರರ ಸಲಹೆ ಮತ್ತು ಸಹಕಾರದಂತೆ ಸಂಸ್ಥೆಯನ್ನು ಪ್ರಾರಂಭಿಸಲಾಯಿತು·

ಈ ಕೆಳಕಂಡವರು ಡಾ·ನಾಗರಾಜು ಮತ್ತು ರೇಣುಕಾನಾಗರಾಜು ಫ್ಯಾಮಿಲಿ ಚಾರಿಟಬಲ್ ಟ್ರಸ್ಟಿನ ಪದಾಧಿಕಾರಿಗಳಾಗಿರುತ್ತಾರೆ·

| | | |
|---|---|---|
| 1) | ಶ್ರೀಯುತ ಎಂ·ಚನ್ನಯ್ಯ | ಅಧ್ಯಕ್ಷರು |
| 2) | ಶ್ರೀಯುತ ಡಾ·ಸುದರ್ಶನ್ | ಉಪಾಧ್ಯಕ್ಷರು |
| 3) | ಶ್ರೀಯುತ ಟಿ·ಜಿ·ಸತ್ಯನಾರಾಯಣ | ಕಾರ್ಯದರ್ಶಿ |
| 4) | ಶ್ರೀಮತಿ ಲಕ್ಷ್ಮಿಮರಿಗೌಡ | ಸಹಕಾರ್ಯದರ್ಶಿ |
| 5) | ಶ್ರೀಯುತ·ಪಿ·ಎಂ·ರಾಮಣ್ಣ | ಖಜಾಂಚಿ |
| 6) | ಶ್ರೀಯುತ ಎಂ·ಚಂದ್ರಣ್ಣ | ಟ್ರಸ್ಟಿ |
| 7) | ಶ್ರೀಯುತ ಶಿವಪ್ರಕಾಶ್ | :: |
| 8) | ಶ್ರೀಯುತ·ಡಾ·ಎಂ·ನಾಗರಾಜು | :: |
| 9) | ಶ್ರೀಮತಿ ರೇಣುಕಾನಗರಾಜು | :: |

<u>ಸಂಸ್ಥೆಯ ಕಾರ್ಯಕ್ಷೇತ್ರ:–</u>


ಪ್ರಾರಂಭದ ಹಂತದಲ್ಲಿ ದೊಡ್ಡಬಾಗಿಲು, ಮುತ್ತಲವಾಡಿ ಗ್ರಾಮಪಂಚಾಯ್ತಿಗಳಿಗೆ ಸೇರಿದ 17 ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು ಹಾಲಿ 6 ಗ್ರಾಮಪಂಚಾಯ್ತಿಗಳ 46 ಗ್ರಾಮಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದೇವೆ·

| ಕ್ರ·ಸಂ· | ಗ್ರಾ·ಪಂ· ಹೆಸರು | ಗ್ರಾ·ಸಂಖ್ಯೆ | ಜನಸಂಖ್ಯೆ |
|---|---|---|---|
| 1· | ಮುತ್ತಲವಾಡಿ | 9 | 7908 |
| 2· | ದೊಡ್ಡಬಾಗಿಲು | 8 | 5598 |
| 3· | ಬಿದರವಳ್ಳಿ | 9 | 6030 |
| 4· | ಕೊಳತ್ತೂರು | 8 | 6386 |
| 5· | ಸೋಸಲೆ | 5 | 6692 |
| 6· | ಬೆನಕನಹಳ್ಳಿ | 7 | 5512 |
| | ಒಟ್ಟು | 46ಗ್ರಾಮಗಳು | 38026ಜನಸಂಖ್ಯೆ |

ಸಂಸ್ಥೆಯು ತಾಲ್ಲೂಕಿನ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಸಿಕೊಂಡು 23-8-1997ರಲ್ಲಿ ವೃತ್ತಿತರಬೇತಿ ಕೇಂದ್ರ ಮತ್ತು ಶಿಕ್ಷಕರ ತರಬೇತಿ ಕೇಂದ್ರಕ್ಕಾಗಿ ಶಂಕುಸ್ಥಾಪನಾ ಕಾರ್ಯವನ್ನು ಹೊಸ ಕೈಯಂಬಳ್ಳಿ ಗ್ರಾಮದಲ್ಲಿ ನೆರವೇರಿಸಿದ್ದು ಅಂದಿನ ಉಪಮುಖ್ಯಮಂತ್ರಿಗಳಾದ ಶ್ರೀಯುತ ಸಿದ್ಧರಾಮಯ್ಯ ನವರು ಶಿಲಾನ್ಯಾಸ ನೆರವೇರಿಸಿದರು ಹಾಗೂ ಅಂದಿನ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳಾದ ಶ್ರೀಯುತ ಎಚ್.ಸಿ. ಮಹದೇವಪ್ಪನವರು ಮುಂತಾದವರು ಉಪಸ್ಥಿತರಿದ್ದರು.

ಸಂಸ್ಥೆಯ ಕಾರ್ಯವಿಧಾನ:-

ಸಂಸ್ಥೆಯು ತಿ.ನರಸೀಪುರದಲ್ಲಿ ಬಾಡಿಗೆ ಕಟ್ಟಡದೊಂದಿಗೆ 1996ರಲ್ಲಿ ಪ್ರಾರಂಭವಾಗಿ ಇಂದು ಪುರಾಣ ಪ್ರಸಿದ್ಧವಾದ ಹಳೇತಿರುಮಕೂಡಲಿನಲ್ಲಿ ತನ್ನದೆ ಆದ ಕಛೇರಿಕಟ್ಟಡವನ್ನು ಹೊಂದಿದ್ದು ಯೋಜನಾಧಿಕಾರಿಗಳು ಕಛೇರಿ ಸಹಾಯಕರು ಮತ್ತು ಕಾರ್ಯಕರ್ತರುಗಳಿದ್ದು ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸಲಹೆ ಮೇರೆಗೆ ಕಾರ್ಯನಿರ್ವಹಿಸಲಾಗುತ್ತಿದೆ.




| | |
|---|---|
| 1) ಶ್ರೀ.ಎಸ.ಗಂಗಾಧರನಾಯಕ | ಯೋಜನಾಸಮನ್ವಯಾಧಿಕಾರಿ |
| 2) ಶ್ರೀ ವೆಂಕಟೇಶ | ಜಂಟಿಸಮನ್ವಯಾಧಿಕಾರಿ |
| 3) ಶ್ರೀ ಮಂಜುನಾಥ | ಕಾರ್ಯಕ್ರಮಸಮನ್ವಯಾಧಿಕಾರಿ |
| 4) ಕುಮಾರಿ.ಯಶೋಧ | ಕಛೇರಿ ಸಹಾಯಕರು |
| 5) ಕುಮಾರಿ.ಡಿ.ಶೋಭ | ವಿವಿಧೋದ್ದೇಶ ಕಾರ್ಯಕರ್ತರು |
| 6) ಶ್ರೀ. ಸಿ.ಕೆ.ಶಿವಣ್ಣ | :: |
| 7) ಶ್ರೀ ನಂಜುಂಡಯ್ಯ | :: |
| 8) ಶ್ರೀ ರಾಜು ಕೆ.ಎನ್. | :: |
| 9) ಶ್ರೀಮತಿ ಭ್ರಮರಾಂಭ | :: |
| 10) ಕೆ.ಆರ್.ಶಿವಣ್ಣ | ವಾಹನಚಾಲಕರು |

ಸಂಸ್ಥೆಯು ಈ ಕೆಳಕಂಡಂತೆ ಪ್ರಮುಖ ಕಾರ್ಯಕ್ರಮವನ್ನು ಹೊಂದಿದ್ದು ಕಾರ್ಯನಿರ್ವಹಿಸಲಾಗುತ್ತಿದೆ.

(1) ಸಮುದಾಯದ ಆರೋಗ್ಯ ಮತ್ತು ಶೌಚಾಲಯ ನಿರ್ಮಾಣ ಮತ್ತು ಶುದ್ಧಕುಡಿಯುವನೀರು.
(2) ಶಿಕ್ಷಣಕ್ಕೆ ಪೂರಕವಾದ ಕಾರ್ಯಕ್ರಮಗಳು.
(3) ವೃತ್ತಿತರಬೇತಿ ಮತ್ತು ಸ್ವಯಂ ಉದ್ಯೋಗ.
(4) ಸಮುದಾಯ ಸಂಘಟನೆ ಕಾರ್ಯಕ್ರಮ.
(5) ಸಮುದಾಯ ಅಭಿವೃದ್ಧಿ ಕಾರ್ಯಕ್ರಮ.
(6) ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕ ಕಾರ್ಯಕ್ರಮಗಳು.
(7) ತರಬೇತಿ.

ಇವುಗಳಲ್ಲಿ 1996ರಿಂದ ಜನವರಿ 2000ರ ವರೆಗೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಕೈಗೊಂಡಿದ್ದು ಪ್ರಗತಿ ಈ ಕೆಳಕಂಡಂತಿದೆ.

1. ಸಮುದಾಯ ಆರೋಗ್ಯ ಶೌಚಾಲಯ ಮತ್ತು ಶುದ್ಧವಾದ ಕುಡಿಯುವ ನೀರು:-

| ಕ್ರ.ಸಂ. | ಗ್ರಾ.ಪಂ.ಹೆಸರು | ಕುಷ್ಠ ರೋಗ | ಕ್ಷಯ | ಮೂರ್ಛೆ ರೋಗ | ಮಾನಸಿಕ ಕಾಯಿಲೆ | ಕ್ಯಾನ್ಸರ್ | ಕಣ್ಣಿನ ದೋಷ | ದಂತ ಕಾಯಿಲೆ | ಅಂಗವಿಕಲತೆ | ಒಟ್ಟು |
|---|---|---|---|---|---|---|---|---|---|---|
| 1. | ಮುತ್ತಲವಾಡಿ | 6 | 15 | 3 | 1 | 10 | 13 | 23 | 44 | 175 |
| 2. | ದೊಡ್ಡಬಾಗಿಲು | 17 | 20 | 8 | 5 | 6 | 8 | 30 | 15 | 109 |
| 3. | ಬಿದರವಳ್ಳಿ | 47 | 27 | 12 | 5 | 20 | 18 | 4 | 22 | 155 |
| 4. | ಕೊಳತ್ತೂರು | 8 | 30 | 23 | 3 | 9 | 18 | 139 | 31 | 261 |
| 5. | ನೊಸಲೆ | — | 4 | 5 | 2 | 2 | 67 | 43 | 29 | 152 |
| 6. | ಬೆನಕನಹಳ್ಳಿ | 9 | 23 | 18 | 9 | 5 | 90 | 42 | 23 | 219 |
| | ಒಟ್ಟು | 87 | 119 | 69 | 25 | 52 | 214 | 281 | 164 | 1011 |

ಇವುಗಳಲ್ಲಿ ಮೂರ್ಛೆರೋಗ ಮತ್ತು ಮಾನಸಿಕ ಕಾಯಿಲೆಗಳವರನ್ನು ಯಳಂದೂರಿಗೆ ಕಳುಹಿಸಲಾಗುತ್ತಿದೆ. ಡಾ.ಶ್ರೀಧರ ಮತ್ತು ಡಾ.ಕಿಶೋರ್‌ಕುಮಾರ್‌ರವರು ಚಿಕಿತ್ಸೆನೀಡುತ್ತಿದ್ದಾರೆ. ಉಳಿದ ಕಾಯಿಲೆಗಳಲ್ಲಿ ಕಣ್ಣಿನ ಕಾಯಿಲೆಗಳನ್ನು ಸೂಕ್ತ ಚಿಕಿತ್ಸೆ ನೀಡಲಾಗುತ್ತಿದೆ.

2. ಕ್ಯಾನ್ಸರ್ ಬಗ್ಗೆ ತಿಳುವಳಿಕೆ ಶಿಬಿರಗಳು:-

ಕ್ಯಾನ್ಸರ್ ಕಾಯಿಲೆ ಅಥವಾ ಅರ್ಬುದ ರೋಗದ ಬಗ್ಗೆ ಜನರಲ್ಲಿ ಜಾಗೃತಿಯನ್ನುಂಟುಮಾಡಲು ಮೈಸೂರಿನ ಭಾರತ್‌ಕ್ಯಾನ್ಸರ್ ಮತ್ತು ಗಂಥಿ ಸಂಸ್ಥೆಯ ಸಹಯೋಗದೊಂದಿಗೆ ತಿ.ನರಸೀಪುರತಾಲ್ಲೂಕಿನ ಗ್ರಾಮಪಂಚಾಯ್ತಿಗಳ ನೆರವಿನೊಂದಿಗೆ 17 ಗ್ರಾಮಪಂಚಾಯ್ತಿಕೇಂದ್ರಗಳನ್ನು ಎರಡು ಪಂಚಾಯ್ತಿಗೆ ಒಂದರಂತೆ ಕ್ಯಾನ್ಸರ್ ತಿಳುವಳಿಕಾ ಶಿಬಿರಗಳನ್ನು ನಡೆಸಲಾಯಿತು. ಡಾ.ಟಿ.ಎನ್.ಮಂಜುನಾಥಮತ್ತು ಶ್ರೀಯುತ ಹರೀಶರವರು ಈ ಶಿಬಿರಗಳನ್ನು ನಡೆಸಿಕೊಟ್ಟರು. ಗ್ರಾಮಗಳ ಮುಖಂಡರು ಅಂಗನವಾಡಿ ಕಾರ್ಯಕರ್ತೆ, ಆರೋಗ್ಯ ಕಾರ್ಯಕರ್ತರು, ಸ್ವಯಂಸೇವಕರು, ಪ್ರಾಥಮಿಕ ಆರೋಗ್ಯಕೇಂದ್ರದ ಸಿಬ್ಬಂಧಿಗಳು ಭಾಗವಹಿಸಿದ್ದರು.

ಒಟ್ಟು ಶಿಬಿರಗಳು:- 17

| | | |
|---|---|---|
| ಭಾಗವಹಿಸಿದ ಗ್ರಾಮಗಳು, ಮುಖಂಡರು | :- | 81 |
| :: ಅಂಗನವಾಡಿಕಾರ್ಯಕರ್ತರು | | 129 |
| :: ಗ್ರಾಮಆರೋಗ್ಯಕಾರ್ಯಕರ್ತರು | | 303 |
| :: ಸ್ವಯಂಸೇವಕರು | ಒಟ್ಟು | 16 |
| :: ಪ್ರಾ.ಆ.ಕೇಂದ್ರದ ಸಿಬ್ಬಂದಿ | | 90 |
| | ಒಟ್ಟು | 619 |

(3) ಉಚಿತ ಆರೋಗ್ಯ ತಪಾಸಣೆ ಶಿಬಿರಗಳು:—

ಸಂಸ್ಥೆಯು ಕೇಂದ್ರ ಸರ್ಕಾರದ ರಕ್ಷಣಾ ಮಂತ್ರಾಲಯದ ಡೆಬೆಲ ಸಹಯೋಗದೊಂದಿಗೆ 31-1-1998ರಲ್ಲಿ ಕೈಯಂಬಳ್ಳಿ ಮತ್ತು ಬಿದರವಳ್ಳಿಗ್ರಾಮದಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಏರ್ಪಡಿಸಲಾಗಿತ್ತು. ಈ ಎರಡು ಗ್ರಾಮಪಂಚಾಯ್ತಿಗಳ ಗ್ರಾಮಸ್ಥರು ಸುಮಾರು 1500ಜನರು ಇದರ ಪ್ರಯೋಜನವನ್ನು ಪಡೆದರು.

ಜಿಲ್ಲಾ ಪುನರವಸತಿ ಕೇಂದ್ರ ಮೈಸೂರು ಇವರ ಸಹಯೋಗದೊಂದಿಗೆ ಅಂಗವಿಕಲರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿತ್ತು. ಸುಮಾರು 80 ಜನ ಅಂಗವಿಕಲರು ಇದರ ಪ್ರಯೋಜನವನ್ನು ಪಡೆದುಕೊಂಡರು. ಎಂ.ಕೆಬ್ಬೆಹುಂಡಿ ಮತ್ತು ಬಿದರವಳ್ಳಿಗ್ರಾಮಪಂಚಾಯ್ತಿಗಳಲ್ಲಿ ಶಿಬಿರಹಮ್ಮಿಕೊಳ್ಳಲಾಗಿತ್ತು. 6 ಜನರಿಗೆ ಊರುಗೋಲುಗಳನ್ನು ನೀಡಲಾಯಿತು. ಹಾಗೂ ಕೆಲವರನ್ನು ಮೈಸೂರಿನ ಕೆ.ಆರ್.ಆಸ್ಪತ್ರೆ ಮತ್ತು ಮಾನಸಗಂಗೋತ್ರಿಯ ಅಖಿಲಭಾರತವಾಕ್‌ಶ್ರವಣ ಸಂಸ್ಥೆಗೆ ಶಿಫಾರಸ್ಸುಮಾಡಲಾಯಿತು.

(4) ಸಂಚಾರಿ ಆರೋಗ್ಯ ಘಟಕ:—

1998ರಿಂದ 1999ರವರೆಗೆ ಕೈಯಂಬಳ್ಳಿ ಮತ್ತು ಬಿದರವಳ್ಳಿಯ ಪ್ರಾಥಮಿಕ ಆರೋಗ್ಯಕೇಂದ್ರಗಳ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿಯ ನೆರವಿನೊಂದಿಗೆ ಯಾವ ಗ್ರಾಮಗಳಿಗೆ ಆರೋಗ್ಯದ ನೆರವು ಸೂಕ್ತವಾಗಿ ತಲುಪುತ್ತಿಲ್ಲವೋ ಅಂತಹ ಕಡೆ ಸಂಚಾರಿ ಆರೋಗ್ಯ ಘಟಕವನ್ನು ನಡೆಸಲಾಗುತ್ತಿದೆ. ಕೆಂಡನಕೊಪ್ಪಲು, ಕೋಳಿವಮಲ್ಲನಹುಂಡಿ, ಹಳೇನರೀಪುರ ಹೊಸನರೀಪುರ, ಕೋಣಗಳ್ಳಿ, ಬೊಮ್ಮೇ-ಗೌಡನಹುಂಡಿ, ಗ್ರಾಮಗಳಲ್ಲಿ ಘಟಕವು ಕಾರ್ಯನಿರ್ವಹಿಸಿದ್ದು ಈ ಸಂದರ್ಭದಲ್ಲಿ ಉಚಿತವಾಗಿ ಔಷಧಿಗಳನ್ನು ವಿತರಿಸಲಾಯಿತು.

(5) ಅಂಧತ್ವ ನಿವಾರಣ ಕಾರ್ಯಕ್ರಮ:—

ಅಂಧತ್ವನಿವಾರಣ ಕಾರ್ಯಕ್ರಮವು ಸಂಸ್ಥೆಯ ಪ್ರಮುಖ ಕಾರ್ಯಕ್ರಮಗಳಲ್ಲೊಂದಾಗಿದ್ದು ಮೈಸೂರಿನ ರೇಸ್‌ಕ್ಲಬ್ ಕಣ್ಣಿನ ಆಸ್ಪತ್ರೆ ಮತ್ತು ಉಷಾಕಿರಣ ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಕಣ್ಣಿನ ತಪಾಸಣೆ ಶಿಬಿರಗಳು ಮತ್ತು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಲಾಗಿದೆ. ಪ್ರಗತಿ ಈ ಕೆಳಕಂಡಂತಿದೆ.

| | | ಪರೀಕ್ಷಿಸಿದ್ದು | ಕಣ್ಣಿನಶಸ್ತ್ರಚಿಕಿತ್ಸೆಮಾಡಿದ್ದು |
|---|---|---|---|
| 1996 ರಿಂದ 1998 | 6 ಕ್ಯಾಂಪ್ | 677 | 80 |
| 1998 ರಿಂದ 1999 | 6 ಕ್ಯಾಂಪ್ | 774 | 83 |
| 1999 ರಿಂದ ಜನವರಿ 2000ರವರೆಗೆ | 7 ಕ್ಯಾಂಪ್ | 668 | 82 |
| | 19ಕ್ಯಾಂಪ್ | 2119 | 245 |

(6) ಕೊಳವೆಬಾವಿಗಳ ಪ್ಲಾಟ್‌ಫಾರಂ ನಿರ್ಮಾಣ:—

ಸರ್ಕಾರದಿಂದ ಈಗಾಗಲೇ ನಿರ್ಮಿಸಿದ ಕೊಳವೆಬಾವಿಗಳ ಪ್ಲಾಟ್‌ಫಾರಂಗಳನ್ನು, ಒಡೆದುಹೋಗಿದ್ದಂತವುಗಳನ್ನು ಶುದ್ಧವಾದ ಕುಡಿಯುವ ನೀರಿನ ಪೂರೈಕೆಗಾಗಿ ಹೊಸದಾಗಿ ಪ್ಲಾಟ್‌ಫಾರಂಗಳನ್ನು ನಿರ್ಮಿಸಲಾಗಿದೆ. ಮುತ್ತಲವಾಡಿಗ್ರಾಮ ಪಂಚಾಯ್ತಿಯಲ್ಲಿ 4 ಕೊಳವೆ ಬಾವಿಗಳ ಪ್ಲಾಟ್‌ಫಾರಂ ನಿರ್ಮಾಣ ಮಾಡಲಾಗಿರುತ್ತದೆ.

(7) <u>ಕೈಯಂಬಳ್ಳಿ ಪ್ರಾಥಮಿಕ ಆರೋಗ್ಯಕೇಂದ್ರಕ್ಕೆ ತಂತಿಬೇಲಿ ಮತ್ತು ಕುಡಿಯುವ ನೀರಿನ ಪೂರೈಕೆ ಮಾಡಿದುದು.</u>

ಕೈಯಂಬಳ್ಳಿಯ ಪ್ರಾಥಮಿಕ ಆರೋಗ್ಯಕೇಂದ್ರಕ್ಕೆ ಸಂಸ್ಥೆಯ ವತಿಯಿಂದ ಉಚಿತವಾಗಿ ತಂತಿಬೇಲಿಯನ್ನು ಹಾಕಿಸಿಕೊಡಲಾಗಿದೆ ಹಾಗೂ ಕುಡಿಯುವ ನೀರಿನ ಸರಬರಾಜನ್ನು ಮಾಡಿದುದು ಟ್ಯಾಂಕನ್ನು ಸಹ ದುರಸ್ಥಿಮಾಡಿಸಿಕೊಡಲಾಗಿದೆ.

(8) <u>ಆರೋಗ್ಯ ಶಿಕ್ಷಣ ನೀಡುವುದು:—</u>

ಸಂಸ್ಥೆಯ ಕಾರ್ಯಕರ್ತರು ಗ್ರಾಮಗಳಲ್ಲಿ ಬೇಟಿ ನೀಡಿದಾಗ ಮತ್ತು ಮನೆ ಮನೆ ಬೇಟಿ ವಾಡಾ ನೀಡಿದಾಗ ಜನರಿಗೆ ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡುತ್ತಿದ್ದರು. ಹಾಗೂ ಗ್ರಾಮಗಳಲ್ಲಿ ವಿಡಿಯೋ ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಿ ಆರೋಗ್ಯ ಶಿಕ್ಷಣವನ್ನು ನೀಡಲಾಗುತ್ತಿದೆ ಇದುವರೆವಿಗೆ ಒಟ್ಟು 11 ಗ್ರಾಮಗಳಲ್ಲಿ ಚಲನಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಸುಮಾರು 1200ಜನರು ವೀಕ್ಷಿಸಿದ್ದಾರೆ. ವೈಯುಕ್ತಿಕ ಸ್ವಚ್ಛತೆ, ಜನಸಂಖ್ಯೆ ಬೆಳವಣಿಗೆ, ಕುಡಿತದುದುಷ್ಪರಿಣಾಮ ಮುಂತಾದವುಗಳ ಬಗ್ಗೆ ಚಲನಚಿತ್ರ ಪ್ರದರ್ಶನ ನೀಡಲಾಗುತ್ತಿದೆ.

(9) <u>ಕುಟುಂಬಗಳಿಗೆ ಶೌಚಾಲಯ ನಿರ್ಮಾಣಕ್ಕೆ ನೆರವು:—</u>

ಸಂಸ್ಥೆಯ ಪ್ರಮುಖ ಕಾರ್ಯಕ್ರಮಗಳಲ್ಲೊಂದಾದ ಪ್ರತಿ ಕುಟುಂಬಗಳಿಗೆ ಶೌಚಾಲಯ ನಿರ್ಮಾಣ ಮಾಡಲು ಜಿಲ್ಲಾಪಂಚಾಯ್ತಿಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸಲಾಗುತ್ತಿದೆ. ಇದುವರೆಗಿನ ಪ್ರಗತಿ ಈ ಕೆಳಕಂಡಂತಿದೆ.

| | | |
|---|---|---|
| 1996—98 ರಲ್ಲಿ | ನಿರ್ಮಿಸಿದ ಶೌಚಾಲಯಗಳು | 104 |
| 1998—99 ರಲ್ಲಿ | | 33 |
| 1999—2000 ಜನವರಿಯಲ್ಲಿ | | 35 |
| | | ಒಟ್ಟು172 |

ಸಂಸ್ಥೆಯು ಸರ್ಕಾರದ ಸಹಾಯಧನದ ಜೊತೆ 220ರೂಗಳನ್ನು ಹೆಚ್ಚಿಗೆ ಹಣ ನೀಡಲಾಗುತ್ತಿದೆ ಹಾಗೂ ಸಂಸ್ಥೆಯ ಕಾರ್ಯಕರ್ತರಿಂದ ಸೂಕ್ತ ರೀತಿಯಲ್ಲಿ ಮಾರ್ಗದರ್ಶನನೀಡಲಾಗುತ್ತಿದೆ.

(10) <u>ಗ್ರಾಮ ಆರೋಗ್ಯ ಸಮಿತಿ ರಚನೆ:—</u> '' ಗ್ರಾಮೀಣ ಬಡಜನರ ಉತ್ತಮ ಆರೋಗ್ಯಕ್ಕಾಗಿ ಸಶಕ್ತತೆ'' ಕಾರ್ಯಕ್ರಮ.

ಈ ಕಾರ್ಯಕ್ರಮವು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವಿಶ್ವಆರೋಗ್ಯ ಸಂಸ್ಥೆಯ ನೆರವಿನೊಂದಿಗೆ ಬಿಳಿಗಿರಿರಂಗನ ಬೆಟ್ಟದ ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರದ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದೆ.

ಭಾರತದಲ್ಲಿ 5 ರಾಜ್ಯಗಳಲ್ಲಿ 6 ತಾಲ್ಲೂಕುಗಳಲ್ಲಿ ಈ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಹಮ್ಮಿಕೊಂಡಿದ್ದು ದಕ್ಷಿಣ ಭಾರತದಲ್ಲಿ ತಿ.ನರಸೀಪುರತಾಲ್ಲೂಕಿನಲ್ಲಿ ಈ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ.

ಕಾರ್ಯಕ್ರಮದ ಮೂಲ ಉದ್ದೇಶವೇನೆಂದರೆ ಸರ್ಕಾರವು ಆರೋಗ್ಯದ ಸೇವಾಸೌಲಭ್ಯಗಳನ್ನು ನೀಡುತ್ತಿದ್ದರು ಅದು ಗ್ರಾಮೀಣ ಬಡಜನರಿಗೆ ಸರಿಯಾಗಿ ತಲುಪುತ್ತಿಲ್ಲ, ಈ ಜನ ಇರುವ ಸೌಲಭ್ಯವನ್ನು ಸರಿಯಾಗಿ ಬಳಸಿಕೊಳ್ಳುತ್ತಿಲ್ಲ, ಪಡೆದುಕೊಳ್ಳುತ್ತಿಲ್ಲ ಹಾಗೂ ಅನವಶ್ಯಕವಾಗಿ ಖಾಸಗಿ ಆಸ್ಪತ್ರೆಗಳಿಗೆ ಹೋಗಿ ಅನವಶ್ಯಕ ವೆಚ್ಚಗಳನ್ನು ಮಾಡುತ್ತಾರೆ. ಇವುಗಳನ್ನು ಜನರೆ ಸರಿಪಡಿಸಿಕೊಂಡು ಉತ್ತಮ ಆರೋಗ್ಯವನ್ನು ಗಳಿಸುವುದರತ್ತ ಗ್ರಾಮಸ್ಥರ ಮನಗಾಣುವುದೇ ಕಾರ್ಯಕ್ರಮದ ಮೂಲ ಉದ್ದೇಶ.

—7—

ದಿನಾಂಕ:22-8-99 ರಿಂದ 30-8-99ರ ವರೆಗೆ ಮಧ್ಯಪ್ರದೇಶದ ಶಿವಪುರಿಯಲ್ಲಿ ನಡೆದ ಸಂಪನ್ಮೂಲ ವ್ಯಕ್ತಿಗಳ ತರಬೇತಿಯನ್ನು ಏರ್ಪಡಿಸಿದ್ದರು ಈ ತರಬೇತಿಗೆ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿಗಳಾದ ಶ್ರೀ ಕೆ.ಶಿವಕುಮಾರ್, ಕರುಣಾಟ್ರಸ್ಟ್ ಸಂಸ್ಥೆಯ ಸಂಯೋಜಕರಾದ ಎಸ್.ಗಂಗಾಧರನಾಯಕ್ ಗುಂಬಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ರಾಮರಾಜಭಟ್, ತಿತಿಮತಿಯ ಪ್ರಾಥಮಿಕ ಆರೋಗ್ಯ ಕೇಂದ್ರದ ಉದಯಕುಮಾರ ರವರುಗಳು ತರಬೇತಿಯನ್ನು ಪಡೆದಿರುತ್ತಾರೆ.

ತಾಲ್ಲೂಕು ಮಟ್ಟದಲ್ಲಿ ದಿನಾಂಕ:21-10-99ರಿಂದ 30-10-99ರ ವರೆಗೆ ಮುಡುಕುತೊರೆಯ ಶ್ರೀಭ್ರಮರಾಂಭ ಮಠದಲ್ಲಿ ಮೊದಲನೆ ಹಂತದಲ್ಲಿ ದಿನಾಂಕ:25-11-99ರಿಂದ 1-12-99ರವರೆಗೆ ತಿರುಮಕೂಡಲಿನ ಶ್ರೀವ್ಯಾಸರಾಜಮಠದಲ್ಲಿ ತರಬೇತಿಯನ್ನು ಪ್ರಾಥಮಿಕ ಆರೋಗ್ಯಕೇಂದ್ರದ ಸಿಬ್ಬಂದಿಗಳಿಗೆ ಸಂಸ್ಥೆಯು ಸಿಬ್ಬಂದಿಗಳಿಗೆ ಮತ್ತು ಸ್ವಯಂ ಸೇವಕರಿಗೆ ಒಟ್ಟು 60 ಜನರಿಗೆ ತತಬೇತಿ-ಯನ್ನು ನೀಡಲಾಗಿರುತ್ತದೆ.

ದಿನಾಂಕ:16-12-99 ರಿಂದ 24-3-2000 ರ ವರೆಗೆ ಒಟ್ಟು 52 ಜನರು ತಾಲ್ಲೂಕಿನ ಎಲ್ಲಾ ಗ್ರಾಮಗಳಲ್ಲಿ ಪ್ರತಿ ಹಳ್ಳಿಯಲ್ಲಿ 4ದಿನದಂತೆ 4 ಜನರ ತಂಡದಲ್ಲಿ 217 ಗ್ರಾಮಗಳಲ್ಲಿ 250 ಪಿ.ಆರ್.ಎ. ಮತ್ತು ಸೂಕ್ಷ್ಮ ಯೋಜನೆಯನ್ನು ಮಾಡುತ್ತಿದ್ದಾರೆ.

ದಿನಾಂಕ:16-12-99 ರಿಂದ 20-1-2000ರವರೆಗೆ 92 ಗ್ರಾಮಗಳಲ್ಲಿ ಈಗಾಗಲೇ ಪಿ.ಆರ್.ಎ. ಮತ್ತು ಸೂಕ್ಷ್ಮಯೋಜನೆ ಕಾರ್ಯ ಮುಗಿದಿರುತ್ತದೆ.

(2) <u>ಶಿಕ್ಷಣಕ್ಕೆ ಪೂರಕ ಕಾರ್ಯಕ್ರಮಗಳು:-</u>

ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ(ಡಿ.ಪಿ.ಇ.ಪಿ.) ಈ ಕಾರ್ಯಕ್ರಮವು ಕರ್ನಾಟಕ ಸರ್ಕಾರದ ವಿಶಿಷ್ಟ ಕಾರ್ಯಕ್ರಮವಾಗಿದ್ದು ಜಿಲ್ಲಾಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ ಈಗಾಗಲೇ ಅನುಷ್ಠಾನಗೊಳ್ಳುತ್ತಿದೆ. ಸಂಸ್ಥೆಯು ಈ ಕಾರ್ಯಕ್ರಮದಲ್ಲಿ ಬಿದರವಳ್ಳಿವಲಯದ ಜವಾಬ್ದಾರಿಯನ್ನು ಈ ಕೆಳಕಂಡ ಕಾರ್ಯಕ್ರಮಗಳಲ್ಲಿ ತೆಗೆದುಕೊಂಡಿರುತ್ತವೆ.

<u>ಸೂಕ್ಷ್ಮಯೋಜನೆ:</u>- ಗ್ರಾಮದಲ್ಲಿ ಜನರಿಗೆ ಶಿಕ್ಷಣದ ಮಹತ್ವದ ಬಗ್ಗೆ ಅರಿವು ಮೂಡಿಸುವುದು. ಶಾಲೆಬಿಟ್ಟ ಮತ್ತು ಶಾಲೆಗೆ ದಾಖಲಾದ ಮಕ್ಕಳ ಬಗ್ಗೆ ಜನರಿಗೆ ಸೂಕ್ತ ಮಾಹಿತಿ ನೀಡಿ ಗ್ರಾಮದ ಶೈಕ್ಷಣಿಕ ಅಭಿವೃದ್ಧಿಗಾಗಿ ಗ್ರಾಮಸ್ಥರು ತೊಡಗಿಸಿಕೊಳ್ಳುವಂತೆ ಮಾಡುವುದೇ ಈ ಯೋಜನೆಯಾಗಿದ್ದು 21ಗ್ರಾಮಗಳಲ್ಲಿ ಸೂಕ್ಷ್ಮಯೋಜನೆ ಮಾಡಲಾಗಿರುತ್ತದೆ.

<u>ಗ್ರಾಮ ಶಿಕ್ಷಣ ಸಮಿತಿ ರಚನೆ ಮತ್ತು ತರಬೇತಿ:</u>- ಈಗಾಗಲೇ ಗ್ರಾಮ ಶಿಕ್ಷಣ ಸಮಿತಿ ರಚನೆಯಾಗಿದ್ದು, ಅವುಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿಲ್ಲದೆ ಇದ್ದರೆ ಅವುಗಳನ್ನು ಕ್ರಿಯಾಶೀಲತೆಗೊಳಿಸುವುದು ಹಾಗೂ ಅವರಿಗೆ ಸೂಕ್ತ ತರಬೇತಿ ನೀಡಲಾಗುವುದು ಹಾಗೂ ಸಮಿತಿ ರಚನೆಯಾಗದೆ ಇರುವ ಕಡೆ ಸಮಿತಿ ರಚಿಸಲು ಸಹಕರಿಸಲಾಗುವುದು.

<u>ಅನೌಪಚಾರಿಕ ಶಿಕ್ಷಣ ಕೇಂದ್ರ:</u>- ಸೂಕ್ಷ್ಮಯೋಜನೆ ಮಾಡಿದ ಗ್ರಾಮಗಳಲ್ಲಿ 15ಕ್ಕಿಂತ ಹೆಚ್ಚು ಶಾಲೆಬಿಟ್ಟ ಮತ್ತು ಶಾಲೆಗೆ ದಾಖಲಾಗದ ಮಕ್ಕಳು ಇರುವ ಕಡೆ ಅನೌಪಚಾರಿಕ ಶಿಕ್ಷಣಕೇಂದ್ರವನ್ನು ತೆರೆಯಲಾಗುವುದು ಈಗಾಗಲೇ 8 ಹಳ್ಳಿಗಳನ್ನು ಗುರ್ತಿಸಲಾಗಿದೆ.

(2) ವಯಸ್ಕ ಶಿಕ್ಷಣ ಕಾರ್ಯಕ್ರಮ:—

ವಯಸ್ಕರ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಕನ್ನಡನಾಡು ಸಾಕ್ಷರನಾಡು ಕಾರ್ಯಕ್ರಮದಲ್ಲಿ ನಾಲ್ಕು ಗ್ರಾಮಪಂಚಾಯ್ತಿಗಳ ಜವಾಬ್ದಾರಿಯನ್ನು ತೆಗೆದುಕೊಂಡು ಜಿಲ್ಲಾ ಸಾಕ್ಷರವಾಹಿನಿಯ ಸಹಯೋಗದೊಂದಿಗೆ ಕಾರ್ಯನಿರ್ವಹಿಸಲಾಯಿತು.

| ಕ್ರ.ಸಂ. | ಗ್ರಾ.ಪಂ. ಹೆಸರು | ಕಲಿಕಾಕೇಂದ್ರಕ್ಕೆ ಹಾಜರಾದವರು | ಮೌಲ್ಯಮಾಪನಕ್ಕೆ ಒಳಪಟ್ಟವರು | ತೆರೆದಿದ್ದ ಕಲಿಕಾಕೇಂದ್ರಗಳ |
|---|---|---|---|---|
| 1. | ಮುತ್ತಲವಾಡಿ | 440 | 340 | 44 |
| 2. | ದೊಡ್ಡಬಾಗಿಲು | 386 | 360 | 38 |
| 3. | ಬಿದರವಳ್ಳಿ | 500 | 250 | 50 |
| 4. | ಕೊಳತೂರು | 450 | 353 | 45 |
| | ಒಟ್ಟು | 1776 | 1283 | 177 |

ಮೌಲ್ಯಮಾಪನಕ್ಕೆ ಒಳಪಟ್ಟವರು ತಮ್ಮ ಹೆಸರು ಹಾಗೂ ಸಣ್ಣ ಸಣ್ಣ ಪದಗಳನ್ನು ಬರೆಯುತ್ತಾರೆ ಹಾಗೂ ಸಣ್ಣ ಸಣ್ಣ ಪದಗಳನ್ನು ಓದುತ್ತಾರೆ. ಇವರಿಗೆ ಮುಂದುವರಿಕೆ ಶಿಕ್ಷಣ ನೀಡಬೇಕಾಗಿರುತ್ತದೆ.

(3) ಶಾಲಾ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ:—

ಪ್ರತಿವರ್ಷವು ಶಾಲಾ ಮಕ್ಕಳಿಗೆ ಸಾಂಸ್ಕೃತಿಕ ಮತ್ತು ಕ್ರೀಡಾಕಾರ್ಯಕ್ರಮಗಳನ್ನು ಏರ್ಪಡಿಸಿ ಮಕ್ಕಳ ಮಾನಸಿಕ ಮತ್ತು ಭೌದ್ಧಿಕ ವಿಕಾಸಕ್ಕೆ ಅನುಕೂಲವಾಗುವಹಾಗೆ ಪಠ್ಯೇತರ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ. ಸ್ವಾತಂತ್ರ ದಿನಾಚರಣೆ ಹಾಗೂ ಗಣರಾಜ್ಯೋತ್ಸವದ ಅಂಗವಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಿಜೇತಮಕ್ಕಳಿಗೆ ಬಹುಮಾನ ನೀಡಲಾಗುತ್ತಿದೆ.

(4) ಶಾಲೆಗಳಿಗೆ ಕುಡಿಯುವ ನೀರು ಕಾಂಪೌಂಡ್— ತಂತಿಬೇಲಿ ಮತ್ತು ವಿದ್ಯುತ್‌ಸರಬರಾಜು:—

ಕೈಯಂಬಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಸಂಸ್ಥೆಯ ವತಿಯಿಂದ ವಿದ್ಯುತ್ ಸರಭರಾಜು ಕುಡಿಯುವನೀರಿನ ಸರಭರಾಜು ಮಾಡಿಕೊಡಲಾಗಿದೆ. ಹಾಗೂ ತಂತಿಬೇಲಿಯನ್ನು ಸಹ ಹಾಕಿಸಲಾಗಿರುತ್ತದೆ.

ಹೊರಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕಾಂಪೌಂಡ ಕುಡಿಯುನೀರು ಮತ್ತು ಶೌಚಾಲಯ ನಿರ್ಮಾಣ ಮಾಡಿಕೊಡಲಾಗಿರುತ್ತದೆ. ಹಾಗೂ 10 ಶಾಲೆಗೆ ಕಾಂಪೌಂಡ ಶೌಚಾಲಯ ಮತ್ತು ಕುಡಿಯು ನೀರಿನ ಸರಭರಾಜಿಗಾಗಿ ಶಾಲೆಗಳನ್ನು ಗುರ್ತಿಸಿದ್ದು ಕೆಲಸ ಭರದಿಂದ ಪ್ರಾರಂಭಿಸಲು ಕಾರ್ಯತತ್ಪರರಾಗಿರುತ್ತೇವೆ.

(3) ವೃತ್ತಿ ತರಬೇತಿ ಮತ್ತು ಸ್ವಯಂ ಉದ್ಯೋಗ:—

ಗ್ರಾಮೀಣ ವಿದ್ಯಾವಂತ ನಿರುದ್ಯೋಗಿ ಯುವಕ ಯುವತಿಯರಿಗೆ ಸ್ವಯಂ ಉದ್ಯೋಗ ಕಲ್ಪಿಸುವ ಹಿತದೃಷ್ಟಿಯಿಂದ ಮೈಸೂರಿನ ಜೆ.ಎಸ್.ಎಸ್. ಅಂಗವಿಕಲ ಪಾಲಿಟೆಕ್ನಿಕನ ಸಹಯೋಗದೊಂದಿಗೆ ನಮ್ಮ ಕಾರ್ಯಕ್ಷೇತ್ರದಲ್ಲಿ ಈ ಕೆಳಕಂಡ ವಿವಿಧ ವೃತ್ತಿತರಬೇತಿಗಳನ್ನು ಹಮ್ಮಿಕೊಂಡಿದ್ದು ಪ್ರಗತಿ ಈ ಕೆಳಕಂಡಂತಿದೆ.

| ಕ್ರ.ಸಂ. | ತರಬೇತಿ | ಸ್ಥಳ | ಅವಧಿ | ತರಬೇತಿಪಡೆದವರು | | ಸ್ವಯಂಉದ್ಯೋಗ ಕೈಗೊಂಡವರು. |
|---|---|---|---|---|---|---|
| 1. | ಹೊಲಿಗೆತರಬೇತಿ | ದೊಡ್ಡಬಾಗಿಲು | 6ತಿಂಗಳು | 25 | 17 | 7 |
| 2. | :: | ಎಂ.ಕೆಬ್ಬೆಹುಂಡಿ | :: | 26 | 26 | 6 |

| | | | | | | |
|---|---|---|---|---|---|---|
| 3. | ಹೊಲಿಗೆ | ಬಿದರವಳ್ಳಿ | 6ತಿಂಗಳು | 20 | 18 | 5 |
| 4. | ನಿಟ್ಟಿಂಗ | ಕೈಂತಂಬಳ್ಳಿ | 3 :: | 13 | 13 | 2 |
| 5. | :: | ಎಸ್.ಮೇಗಡಹಳ್ಳಿ | :: | 21 | 21 | 2 |
| 6. | :: | ಕೊಳತ್ತೂರು | :: | 20 | 20 | 2 |
| 7. | ವೈರಿಂಗ್ ತರಬೇತಿ | ಬಿದರವಳ್ಳಿ | :: | 18 | 13 | 5 |
| 8. | :: | ಹೊರಟಹಳ್ಳಿ | 4 ತಿಂಗಳು | 20 | 14 | 5 |
| 9. | ರೇಡಿಯೋ ಮತ್ತು ಟಿ.ವಿ.ರಿಪೇರಿ | ಹೊರಳಹಳ್ಳಿ | :: | 20 | 15 | 2 |
| 10. | ಜರಿಕೆಲಸ | ಹಳೇನರಿಪುರ | 3 :: | 25 | 25 | 5 |
| 11. | ಅಣಬೆ ತರಬೇತಿ | ತಿ.ನರಸೀಪುರ | 1 ದಿನ | 200 | 200 | — |
| | | | | 408 | 382 | 41 |

(4) ಸಮುದಾಯ ಸಂಘಟನೆ:—

ಸಂಸ್ಥೆಯ ಪ್ರಮುಖ ಕಾರ್ಯಕ್ರಮಗಳಲ್ಲಿ ಒಂದಾದ ಸಮುದಾಯ ಸಂಘಟನೆಯು ಅತ್ಯಂತ ಪ್ರಮುಖವಾಗಿದೆ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

1. ಮಹಿಳಾ ಸ್ವ-ಸಹಾಯ ಸಂಘ ಪ್ರಾರಂಭ:—

ಆರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಒಂದುಗೂಡಿಸಿ ಅವರಲ್ಲಿ ಉಳಿತಾಯದ ಮನೋಭಾವನೆಯನ್ನುಂಟುಮಾಡುವುದು ಮರುಪಾವತಿಯನ್ನು ರೂಢಿಸುವುದು. ಹಾಗೂ ಗುಂಪಿನಲ್ಲಿ ಕಾರ್ಯನಿರ್ವಹಿಸುವಂತೆ ಮನೋಭಾವನೆಯುಂಟುಮಾಡುವುದರ ಮುಖಾಂತರ ಕುಟುಂಬಗಳ ಅಭಿವೃದ್ಧಿಯ ಕಡೆ ಈ ಸಂಘಗಳು ಕಾರ್ಯನಿರ್ವಹಿಸುತ್ತಾ ಗ್ರಾಮದ ಸರ್ವಾಂಗೀಣ ಪ್ರಗತಿಗೆ ಶ್ರಮಿಸುವ ಸಂಘಗಳಾಗಿರುತ್ತವೆ ಈ ಕೆಳಕಂಡಂತೆ ಸಂಘಗಳನ್ನು ಈಗಾಗಲೇ ರಚಿಸಾಲಾಗಿರುತ್ತದೆ.

| ಕ್ರ.ಸಂ. | ಗ್ರಾ.ಪಂ. ಹೆಸರು | ಒಟ್ಟು ಸಂಘಗಳು | ಬ್ಯಾಂಕ್ ಖಾತೆ ತೆರೆದಿರುವುದು. |
|---|---|---|---|
| 1. | ದೊಡ್ಡಬಾಗಿಲು | 12 | 11 |
| 2. | ಮುತ್ತಲವಾಡಿ | 6 | 2 |
| 3. | ಕೊಳತ್ತೂರು | — | — |
| 4. | ಬಿದರವಳ್ಳಿ | 1 | — |
| 5. | ಹೊಸರಿ | 12 | 12 |
| 6. | ಬೆನಕನಹಳ್ಳಿ | 1 | — |
| | ಒಟ್ಟು | 32 | 25 |

2. ದ್ವಾಕ್ರಾ ಗುಂಪಿನ ರಚನೆ:—

ಎಸ್.ಮೇಗಡಹಳ್ಳಿ ಗ್ರಾಮದಲ್ಲಿ ದ್ವಾಕ್ರಾ ಗುಂಪನ್ನು ರಚಿಸಲಾಗಿದೆ. ಇವರಿಗೆ ಜಿಲ್ಲಾ ಪಂಚಾಯ್ತಿಯಿಂದ ಸುತ್ತುನಿಧಿಯಿಂದ 25—000ರೂಗಳನ್ನು ಸಹ ನೀಡಲಾಗಿರುತ್ತದೆ. ಇವರು ಈಗಾಗಲೇ ಬ್ಯಾಂಕಿಗೆ 25,000ರೂಗಳನ್ನು ಹಿಂತಿರುಗಿಸಿರುತ್ತಾರೆ.

3. ಸ್ವರ್ಣಜಯಂತಿ ಗ್ರಾಮಸ್ವರೋಜ್ಗಾರ್ ಯೋಜನೆ:— ಎಸ್.ಜಿ.ಎಸ್.ವೈ.

ಕೇಂದ್ರ ಸರ್ಕಾರವು ಈ ಹಿಂದೆ ಇದ್ದ ಐ.ಆರ್.ಡಿ.ಪಿ. ದ್ವಾಕ್ರಾ, ಗಂಗಾಕಲ್ಯಾಣ, ಮುಂತಾದ ಯೋಜನೆಯನ್ನು ರದ್ದುಗೊಳಿಸಿ ಹೊಸದಾಗಿ ಸ್ವರ್ಣಜಯಂತಿ ಗ್ರಾಮಸ್ವರೋಜ್ಗಾರ

ಯೋಜನೆಯನ್ನು ಮಾಡಿದ್ದು ಕಾರ್ಯಕ್ರಮದಿಂದಲ್ಲಿ ಸೋಸಲೆಗ್ರಾಮದಲ್ಲಿ ಕಾರದಪುಡಿ ಘಟಕಕ್ಕೆ ಹಾಗೂ ಬಿದರವಳ್ಳಿಗ್ರಾಮದಲ್ಲಿ ಡೈರಿ ಘಟಕಕ್ಕೆ ಅಂತ್ಯಮಾಡಲಾಗಿರುತ್ತದೆ. ನಂತರ ಉಳಿದ ಸ್ವ-ಸಹಾಯ ಸಂಘಗಳನ್ನು ಇದರ ಗುಂಪಿಗೆ ಸೇರಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ.

(5) ಸಮುದಾಯ ಅಭಿವೃದ್ಧಿ ಕಾರ್ಯಕ್ರಮ:-

1. ಸಮಗ್ರ ಕುಡಿಯುವ ನೀರು ಪರಿಸರನೈರ್ಮಲ್ಯೀಕರಣಯೋಜನೆ ವಿಶ್ವಬ್ಯಾಂಕ್‌ನೆರವಿನ ಯೋಜನೆ:-

ಈ ಯೋಜನೆಯು ಸರ್ಕಾರದ ಯೋಜನೆಯಾಗಿದ್ದು ನಮ್ಮ ಕಾರ್ಯಕ್ಷೇತ್ರದಮೂರು-ಗ್ರಾಮಗಳಲ್ಲಿ ಈ ಯೋಜನೆ ಅನುಷ್ಠಾನಗೊಳ್ಳುತ್ತಿದ್ದು ಇದರ ಮೂಲಉದ್ದೇಶ ಗ್ರಾಮದಲ್ಲಿ ಜನರಿಗೆ ಆವಶ್ಯಕವಾಗಿ ಬೇಕಾದ ನೀರಿನ ಪೂರೈಕೆ ಅದಕ್ಕೆ ಸೂಕ್ತವಾದ ರಸ್ತೆ, ಚರಂಡಿಗಳ ನಿರ್ಮಾಣ ಹಾಗೂ ಪರಿಸರ ನೈರ್ಮಲ್ಯೀಕರಣದ ದನಕರು ಕುಡಿಯುವನೀರಿನ ತೊಟ್ಟಿಗಳ ನಿರ್ಮಾಣ ಬಟ್ಟೆ ಒಗೆಯುವ ಕಲ್ಲುಗಳ ನಿರ್ಮಾಣ, ಶೌಚಾಲಯಕ್ಕೆ ನೆರವು ಮುಂತಾದವುಗಳನ್ನು ಹೊಂದಿದ್ದು ರಸ್ತೆ ಮತ್ತು ಚರಂಡಿಯ ಕಾಮಗಾರಿಯಲ್ಲಿ ಶೇ.30 ರಷ್ಟು ಹಣವನ್ನು ಗ್ರಾಮಸ್ಥರು ನೀಡಬೇಕಾಗಿದೆ. ಹಾಗೂ ಇದರ ಅನುಷ್ಠಾನಕ್ಕಾಗಿ ಪ್ರತಿ ಗ್ರಾಮದಲ್ಲಿ ಗ್ರಾಮಸ್ಥರ ಸಮಿತಿಯೊಂದಿದ್ದು ಕಾರ್ಯಕ್ರಮದ ಉಸ್ತುವಾರಿಯನ್ನುವಹಿಸುತ್ತಿದೆ. ಕಾರ್ಗಳ್ಳಿಕೃಷ್ಣಪುರ ಗ್ರಾಮಕ್ಕೆ ಸಂಸ್ಥೆಯಿಂದ 15,000ರೂಗಳನ್ನು ಬಿದರವಳ್ಳಿಗ್ರಾಮಕ್ಕೆ 17,000ರೂಗಳನ್ನು ದೇಣಿಗೆ-ಯಾರಿಡಿ ಗ್ರಾಮಸ್ಥರಪರವಾಗಿ ನೀಡಲಾಗಿರುತ್ತದೆ.

| ಕ್ರಮಸಂ ವಿವರಗಳು | ಕಾರ್ಗಳ್ಳಿ:ಕೃಷ್ಣಪುರ | ಬಿದರವಳ್ಳಿ | ಚಿಕ್ಕಬೂವಳ್ಳಿ |
|---|---|---|---|
| ಅಂದಾಜುವೆಚ್ಚ | | | |
| ಕುಡಿಯುನೀರಿನ ಸರಬರಾಜಿಗಾಗಿ | 9—63 ಲಕ್ಷ | 9.89, ಲಕ್ಷ | 6,32 ಲಕ್ಷ |
| ರಸ್ತೆ ಮತ್ತು ಚರಂಡಿಗಾಗಿ | 7 ಲಕ್ಷ | 6.28ಲಕ್ಷ | 4.18 ಲಕ್ಷ |
| ಹ್ಯಾಬಿಟೇಟ್‌ಕಾಮಗಾರಿ | 3.15 ಲಕ್ಷ | 2.59ಲಕ್ಷ | 1.25 ಲಕ್ಷ |
| ಒಟ್ಟು ಅಂದಾಜು | 19.78ಲಕ್ಷ | 18.87ಲಕ್ಷ | 11,75ಲಕ್ಷ |
| ಸಂಸ್ಥೆಯಿಂದನೀಡಿರುವಹಣ | 15,000 | 17,000 | — |
| ಕೆಲಸದ ಪ್ರಗತಿ | | | |
| ಕುಡಿಯುವನೀರಿನಸರಬರಾಜು | ಮುಕ್ತಾಯ | ಮುಕ್ತಾಯ | ಮುಕ್ತಾಯ |
| ರಸ್ತೆ ಮತ್ತು ಚರಂಡಿ | ಮುಕ್ತಾಯವಾಗಿಲ್ಲ | ಮುಕ್ತಾಯದ ಹಂತದಲ್ಲಿದೆ | ಮುಕ್ತಾಯದ ಹಂತದಲ್ಲಿದೆ. |
| ಹ್ಯಾಬಿಟೇಟ್‌ಕಾಮಗಾರಿ | ಮುಕ್ತಾಯದ ಹಂತದಲ್ಲಿದೆ. | :: | :: |

2. ಗೊಬ್ಬರ ಅನಿಲಸ್ಥಾವರ ನಿರ್ಮಾಣ:-

ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿ ಮತ್ತು ಜಿಲ್ಲಾಪಂಚಾಯ್ತಿಯ ನೆರವಿನೊಂದಿಗೆ ಗ್ರಾಮಾಂತರ ಪ್ರದೇಶದಲ್ಲಿರುವವರ ರೈತ ಕುಟುಂಬಗಳಿಗೆ ಗೊಬ್ಬರ ಅನಿಲಸ್ಥಾವರವನ್ನು ನಿರ್ಮಿಸಿಕೊಡಲು ಸರ್ಕಾರದ ಸಹಾಯಧನದ ಜೊತೆ ಸಂಸ್ಥೆಯಿಂದಲು ಸಹ ಸಹಾಯಧನನೀಡುತ್ತಿದ್ದು ಈ ಕಳೆದವರ್ಷ ಗೊಬ್ಬರ ಅನಿಲಸ್ಥಾವರ ನಿರ್ಮಾಣ ಮಾಡಲಾಗಿರುತ್ತದೆ.

| ಕ್ರ.ಸಂ. | ಗ್ರಾ.ಪಂ. ಹೆಸರು | ಗೋಬ್ಬರ ಅನಿಲಸ್ಥಾವರ ನಿರ್ಮಾಣ ಮಾಡಿದ್ದು |
|---|---|---|
| 1. | ಮುತ್ತಲವಾಡಿ | 8 |
| 2. | ದೊಡ್ಡಬಾಗಿಲು | 3 |
| 3. | ಕೊಳತೂರು | 6 |
| 4. | ಬಿದರವಳ್ಳಿ | 5 |
| | | 22 |

ಗೋಬ್ಬರ ಅನಿಲಸ್ಥಾವರ ನಿರ್ಮಾಣಕ್ಕೆ ಒಟ್ಟು ವೆಚ್ಚ 9500-00
ಸರ್ಕಾರದ ಸಹಾಯಧನ 6500-00

ಫಲಾನುಭವಿಯ ವಂತಿಕೆ 2000-00

ಸಂಸ್ಥೆಯು ಫಲಾನುಭವಿಗೆ ನೀಡುವ ಸಹಾಯಧನ 1500-00

ಇದುವರೆಗೆ 22 ಗೋಬ್ಬರ ಅನಿಲಸ್ಥಾವರ ನಿರ್ಮಾಣಕ್ಕೆ ತಲಾ 1500ರಂತೆ ಒಟ್ಟು 33,000ರೂಗಳ ಸಹಾಯಧನ ನೀಡಲಾಗಿದೆ.

3. ವಿಶೇಷ ಘಟಕ ಯೋಜನೆ:- ಖಾದಿ ಮತ್ತು ಗ್ರಾಮೋದ್ಯೋಗ ಮಂಡಲಿಯಿಂದ ವಿಶೇಷ ಘಟಕ ಯೋಜನೆಯಡಿಯಲ್ಲಿ 10 ಜನ ಹರಿಜನ ಫಲಾನುಭವಿಗಳನ್ನು ಆಯ್ಕೆಮಾಡಲಾಗಿದ್ದು ಇದರಲ್ಲಿ 5 ಜನರಿಗೆ ಈಗಾಗಲೇ ಬ್ಯಾಂಕಿನವತಿಯಿಂದ ಸಾಲ ಮತ್ತು ಸಹಾಯಧನ ಮಂಜೂರು ಮಾಡಲಾಗಿದೆ.

| ಕ್ರ.ಸಂ. | ಘಟಕದ ಹೆಸರು | ಸಂಖ್ಯೆ | ಸಾಲನೀಡಿರುವುದು |
|---|---|---|---|
| 1. | ಸೈಕಲಷಾಪ್ | 3 | 1 |
| 2. | ಮರದ ಕೆಲಸ | 1 | - |
| 3. | ಅಗರಬತ್ತಿ | 4 | 2 |
| 4. | ಕಸಬರಿಕೆ | 1 | 1 |
| 5. | ಚರ್ಮದ ಕೆಲಸ | 1 | 1 |
| | | 10 | 5 |

ಕಂಬಳ್ಳಿವಿತರಣೆ:-

ಸಂಸ್ಥೆಯಿಂದ ಬಡವರು ಮತ್ತು ವೃದ್ಧರಿಗೆ ಉಚಿತವಾಗಿ ಕಂಬಳಿಗಳನ್ನು ವಿತರಿಸಲಾಗಿದೆ. ಒಟ್ಟು 200ಕಂಬಳಿಗಳನ್ನು ದೊಡ್ಡಬಾಗಿಲು, ಮುತ್ತಲವಾಡಿ, ಬಿದರವಳ್ಳಿ, ಮತ್ತು ಕೊಳತೂರು ಗ್ರಾಮಪಂಚಾಯ್ತಿಗಳಿಗೆ ವಿತರಿಸಲಾಗಿದೆ.

<u>ವಿಕಾಸಿನಿ ಯೋಜನೆ:-</u>

ಈ ಯೋಜನೆಯು ರಾಜ್ಯಸರ್ಕಾರದ ಯೋಜನೆಯಾಗಿದ್ದು ಇದರ ಅಡಿಯಲ್ಲಿ ಎಸ್.ಮೇಗಡಹಳ್ಳಿಗ್ರಾಮದಲ್ಲಿ ಒಬ್ಬರನ್ನು ಆಯ್ಕೆಮಾಡಿ 15,000ರೂಗಳ ಸಾಲ ನೀಡಲಾಗಿದ್ದು ಬ್ಯಾಂಕಿನೊಂದ:ಮರುಪಾವತಿಯನ್ನು ಸಹ ಚೆನ್ನಾಗಿ ಮಾಡುತ್ತಿದ್ದಾರೆ.

ಸಸಿ ನೆಡುವಕಾರ್ಯಕ್ರಮ:-

ಸಂಸ್ಥೆಯಿಂದ ಕಾರ್ಯಕರ್ತರು ಮತ್ತು ಅರಣ್ಯಇಲಾಖೆ ಸಹಯೋಗದೊಂದಿಗೆ ಕೈಯಂಬಳ್ಳಿಯ ಪ್ರಾಥಮಿಕ ಆರೋಗ್ಯಕೇಂದ್ರದ ಸುತ್ತ ಸುಮಾರು 300 ಗಿಡಗಳನ್ನು ನೆಡಲಾಗಿದೆ. ಹೊಂಗೆ, ಬೀಟೆ, ತೇಗ, ಹಿಪ್ಪೆ, ಸಂಪಿಗೆ ಇತ್ಯಾದಿಗಳು ಸೇರಿವೆ.

ಪೌಷ್ಟಿಕಾಂಶದ ಗಿಡಗಳ ನರ್ಸರಿ ಮತ್ತು ವಿತರಣೆ:-

ಜನರಿಗೆ ಸ್ಥಳೀಯವಾಗಿ ಸಿಗುವ ಗಿಡಗಳ ಪೌಷ್ಟಿಕಾಂಶದ ಗಿಡಗಳ ಬಗ್ಗೆ ತಿಳಿಸಲು ನುಗ್ಗೆಯ ನರ್ಸರಿಯನ್ನು ಮಾಡಿದ್ದು ಸುಮಾರು 3000 ಗಿಡಗಳನ್ನು ಜನರಿಗೆ ವಿತರಿಸಲಾಗಿದೆ.

ಬೀಜಮೇಳಕಾರ್ಯಕ್ರಮ:-(ಹಳೆತಳಿಗಳ ಸಂರಕ್ಷಣಾ ಕಾರ್ಯಕ್ರಮ)

ವಿವೇಕಾನಂದ ಗಿರಿಜನ ಕಲ್ಯಾಣಕೇಂದ್ರ ಹಾಗೂ ಬೆಂಗಳೂರಿನ ಗ್ರೀನಫೌಂಡೇಷನ್ ಸಂಯುಕ್ತ ಆಶ್ರಯದಲ್ಲಿ ಮೊದಲ ಬಾರಿಗೆ 18-6-99ರಂದು ಬಿದರವಳ್ಳಿಗ್ರಾಮದಲ್ಲಿ ರೈತರಿಗೆ ಹಳೇ ತಳಿಗಳ ಬಗ್ಗೆ ಮಾಹಿತಿ ನೀಡಲು ಬೀಜಮೇಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. 20 ಜನ ರೈತರು ಈ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು.

ಈ ಕೆಳಕಂಡವರಿಗೆ ಹಳೇ ತಳಿಯ ಕೆಂಪುರಾಗಿ ಮತ್ತು ಕರಿಕಡ್ಡಿರಾಗಿಯನ್ನು ಬಿತ್ತನೆ ಬೀಜವನ್ನು ನೀಡಲಾಗಿದ್ದು ಎಲ್ಲರೂ ಸಹ ಬಿತ್ತನೆಮಾಡಿದ್ದು ರಾಗಿಯನ್ನು ಬೆಳೆದಿರುತ್ತಾರೆ.

ಫಲಾನುಭವಿಗಳು:-

| ಕ್ರ.ಸಂ. | ಫಲಾನುಭವಿಗಳ ಹೆಸರು | ಗ್ರಾಮ | ನೀಡಿರುವ ತಳಿಯಹೆಸರು |
|---|---|---|---|
| 1. | ಪಿ.ಪುಟ್ಟರಂಗಯ್ಯ | ಬಿದರವಳ್ಳಿ | ಕೆಂಪುರಾಗಿ |
| 2. | ಪೂಜೆಪುಟ್ಟಮಾದಯ್ಯ | :: | :: |
| 3. | ಮಾದೇವು | :: | :: |
| 4. | ರಾಜು | ಸಿಗ್ಗೋಡಿಪುರ | :: |
| 5. | ಹೆಚ್.ಗುರುಮಲ್ಲಪ್ಪ | ಮುಡುಕನಪುರ | ಕರಿಕಡ್ಡಿರಾಗಿ |
| 6. | ಮಠದಶಿವಣ್ಣ | ಮುಡುಕನಪುರ | :: |

ಮೇಲ್ಕಂಡವರಿಗೆ ತಲಾ 3ಸೇರು ರಾಗಿಯಂತೆ ನೀಡಲಾಗಿದ್ದು ರಾಗಿಯನ್ನು ಬೆಳೆದಿರುತ್ತಾರೆ.

ಕೃಷಿಗೆ ಪೂರಕವಾದ ಕಾರ್ಯಕ್ರಮಗಳು:-

ಸುತ್ತೂರಿನ ಜೆ.ಎಸ್.ಎಸ್.ಎಸ್. ಕೃಷಿವಿಜ್ಞಾನ ಕೇಂದ್ರದ ಸಹಯೋಗದೊಂದಿಗೆ ನಮ್ಮ ಕಾರ್ಯಕ್ಷೇತ್ರದ ರೈತರಿಗೆ ಮಾಹಿತಿಯನ್ನು ನೀಡುವುದು ಹಾಗೂ ಉತ್ತಮ ರೀತಿಯಲ್ಲಿ ಬೆಳೆಗಳನ್ನು ಬೆಳೆಯುವುದರ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕೃಷಿ ಮಾಹಿತಿ ಶಿಬಿರ:-

ಈ ಕೆಳಕಂಡ ಗ್ರಾಮಗಳಲ್ಲಿ ಕೃಷಿ ವಿಜ್ಞಾನ ಕೇಂದ್ರದ ತಂತ್ರಜ್ಞರಿಂದ ಬೀಜ ಸಂರಕ್ಷಣೆ, ವೈಜ್ಞಾನಿಕ ಕೃಷಿ, ಸುಧಾರಿತ ಬಿತ್ತನೆ ಬೀಜ ಹಾಗೂ ಕೀಟಗಳಿಂದ ಸಂರಕ್ಷಣೆ ಮುಂತಾದ ವಿಷಯಗಳ ಬಗ್ಗೆ ಮಾಹಿತಿಗಳನ್ನು ರೈತರಿಗೆ ನೀಡಲಾಗಿದೆ.

| ಕ್ರ.ಸಂ. | ದಿನಾಂಕ | ಗ್ರಾಮಗಳು | ಭಾಗವಹಿಸಿದರೈತರಸಂಖ್ಯೆ |
|---|---|---|---|
| 1. | 2-6-99 | ಹಳೇನರೀಪುರ | 30 |
| 2. | 3-6-99 | ಕಾರ್ಗಹಳ್ಳಿ | 20 |
| 3. | 16-6-99 | ಕೈಯಂಬಳ್ಳಿ | 50 |
| 4. | 23-6-99 | ನಾಗಲಗೆರೆ | 60 |
| 5. | 24-6-99 | ಹೊರಳಹಳ್ಳಿ | 40 |

ಕೃಷಿ ವಿಜ್ಞಾನ ಕೇಂದ್ರದವರಿಂದ ಭಾರತ ಸರ್ಕಾರದ ಐ.ಸಿ.ಎ.ಆರ್ ರವರ ಎಣ್ಣೆಕಾಳುಗಳು ಮತ್ತು ಬೇಳೆಕಾಳುಗಳ ಯೋಜನೆಯಡಿ ನಾಗಲಗೆರೆ ಮತ್ತು ಹೊರಳಹಳ್ಳಿ ಗ್ರಾಮಗಳನ್ನು ಆಯ್ಕೆಮಾಡಿಕೊಂಡು ಪ್ರಗತಿ ಪರ ರೈತರಿಗೆ ಸೂಕ್ತ ಮಾಹಿತಿ ಮತ್ತು ನೆರವನ್ನು ನೀಡಲಾಗುತ್ತಿದೆ. ಈ ಕೆಳಕಂಡಂತೆ ರೈತರನ್ನು ಆಯ್ಕೆಮಾಡಲಾಗಿತ್ತು.

ಕೈಯಂಬಳ್ಳಿಗ್ರಾಮವನ್ನು ರೇಷ್ಮೆ ಕೃಷಿಗೆ ಆಯ್ಕೆಮಾಡಲಾಗಿದ್ದು ನಾಲ್ಕು ಜನ ರೈತರಿಗೆ ತರಬೇತಿ ಮತ್ತು ಉಪಕರಣಗಳನ್ನು ನೀಡಿ ಸುಧಾರಿತ ರೇಷ್ಮೆ ಕೃಷಿಯ ಬಗ್ಗೆ ರೈತರಿಗೆ ಮನವರಿಕೆ ಮಾಡಿಕೊಡಲಾಗಿದೆ ಹಾಗೂ ಇದೇ ಗ್ರಾಮದಲ್ಲಿ ಭತ್ತದ ಪೈರಿಗೆ ರೋಗ ತಗಲುತ್ತಿದ್ದ ಕಾರಣ 10 ಜನ ರೈತರಿಗೆ ಕ್ರಿಮಿನಾಶಕಗಳನ್ನು ಒದಗಿಸಲಾಗಿದ್ದು ಬೇಸಾಯದ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ.

| ಕ್ರ.ಸಂ. | ಆಯ್ಕೆಮಾಡಿರುವಗ್ರಾಮ | ಯೋಜನೆ | ರೈತರಸಂಖ್ಯೆ | ಸಾಮಗ್ರಿನೀಡಿದ್ದು |
|---|---|---|---|---|
| 1. | ನಾಗಲಗೆರೆ | ಕಡಲೆಕಾಯಿ ಎಣ್ಣೆಕಾಳು | 13 | ತಲಾ1ಮೂಟೆ ಡಿ.ಎ.ಪಿ. 2ಮೂಟೆ ಜಿಪ್ಸಂ |
| 2. | ಹೊರಳಹಳ್ಳಿ | ತೊಗರಿ ಬೇಳೆಕಾಳು | 7 | ತಲಾ1ಮೂಟೆ ಡಿ.ಎ.ಪಿ. |
| 3. | ಕೈಯಂಬಳ್ಳಿ | ರೇಷ್ಮೆಕೃಷಿ | 4 | ತಟ್ಟೆಗಳಿಗೆ ಪರದೆ ಮತ್ತು ಹುಳುಗಳಿಗೆ ನೀಡಲಾಗಿದೆ |
| 4. | ಕೈಯಂಬಳ್ಳಿ | ಭತ್ತ | 10 | ಕೀಟನಾಶಕ |

ಇವುಗಳ ಜೊತೆಗೆ ಈ ರೈತರಿಗೆ ಆಗಿಂದಾಗ್ಗೆ ಭೇಟಿ ನೀಡಿ ಪರೀಕ್ಷಿಸಿ ಮಾಹಿತಿಯನ್ನು ಒದಗಿಸಲಾಗುತ್ತಿದೆ. ಹಾಗೂ ಕಡಲೆಕಾಯಿ ಮತ್ತು ತೊಗರಿಯಲ್ಲಿ ಉತ್ತಮ ಇಳುವರಿಯನ್ನು ಪಡೆದಿರುತ್ತಾರೆ.

## (6) ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು:-

ಕೃಷ್ಣಪುರ, ಬಿದರವಳ್ಳಿ ಮತ್ತು ಸೋಸಲಿಗ್ರಾಮಗಳಲ್ಲಿ ಗ್ರಾಮಸ್ಥರನ್ನು ಭೇಟಿಮಾಡಿ ಪ್ರಮುಖ ದೇವಸ್ಥಾನಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅಂದರೆ ತಂತಿಬೇಲಿ ತೋಟ, ನಿರ್ಮಾಣ ಆಧ್ಯಾತ್ಮಿಕ ವಾಚನಾಲಯ ಇವುಗಳ ಬಗ್ಗೆ ಮಾಹಿತಿಯನ್ನು ನೀಡಲಾಗಿರುತ್ತದೆ.

ಗ್ರಾಮಗಳಲ್ಲಿ ಕೀರ್ತನೆ, ಉಪನ್ಯಾಸ ಮತ್ತು ಆಧ್ಯಾತ್ಮಿಕ ಗ್ರಂಥಗಳ ಪಠಣ ಮಾಡಲು ಸೋಸಲಿಗ್ರಾಮದಲ್ಲಿ ಚಿಕ್ಕಮಾದಶೆಟ್ಟಿ ಎಂಬುವವರು ಮುಂದೆ ಬಂದಿರುತ್ತಾರೆ. ಹಾಗೂ ನಮ್ಮ ಕಾರ್ಯಕ್ಷೇತ್ರದಲ್ಲಿ ಆಧ್ಯಾತ್ಮಿಕ ಪ್ರವಚನಗಳನ್ನು ನೀಡಲು ಟಿ.ನರಸೀಪುರದ ಬ್ರಹ್ಮಕುಮಾರಿ ಈಶ್ವರಿ ವಿದ್ಯಾಲಯದವರನ್ನು ಭೇಟಿಮಾಡಲಾಗಿದ್ದು ಅವರಿಂದ ಬಿದರವಳ್ಳಿಗ್ರಾಮದಲ್ಲಿ ಪ್ರವಚನವನ್ನು 3ದಿನಗಳು ಏರ್ಪಡಿಸಲಾಗಿತ್ತು. ಸುಮಾರು 100ಜನರು ಭಾಗವಹಿಸಿದ್ದರು.

## (7) ತರಬೇತಿಗಳು:-

ಸಂಸ್ಥೆಯ ಕಾರ್ಯ ಚಟುವಟಿಕೆಗಳು ಉತ್ತಮವಾಗಿ ನಡೆಯಲು ಮತ್ತು ಕಾರ್ಯಕರ್ತರು ಕಲಿಯುವ ದೃಷ್ಟಿಯಿಂದ ಈ ಕೆಳಕಂಡ ತರಬೇತಿಯನ್ನು ಸಂಸ್ಥೆಯ ಕಾರ್ಯಕರ್ತರಿಗೆ ಒದಗಿಸಲಾಗಿದೆ.

1. ಆರ್.ಎಸ್.ಎಂ. ತರಬೇತಿ:- ಗ್ರಾಮೀಣ ನೈರ್ಮಲ್ಯ ಮಳಿಗೆಯಬಗ್ಗೆ ಸಂಸ್ಥೆಯ ಯೋಜನಾ ಸಮನ್ವಯಾಧಿಕಾರಿಗಳಿಗೆ 5ದಿನದ ತರಬೇತಿಯನ್ನು ಯುನಿಸೆಫ್‌ನೆರವಿನೊಂದಿಗೆ ಓರಿಸ್ಸಾ ರಾಜ್ಯದ ಬರಹ್ಮಾಂಪುರದಲ್ಲಿ ಪಡೆಯಲಾಗಿದೆ.
2. ಪಾರಂಪಾರಿಕ ಔಷಧಿ ಗಿಡಗಳ ಬಗ್ಗೆ:- ಸಂಸ್ಥೆಯ ಕಾರ್ಯಕರ್ತರಿಗೆ ಬಿಳಿಗಿರಿರಂಗನಬೆಟ್ಟದಲ್ಲಿ ವಿ.ಹೆಚ್.ಎ.ಕೆ. ಮತ್ತು ವಿ.ಜಿ.ಕೆ.ಕೆ. ನೆರವಿನೊಂದಿಗೆ ಪಾರಂಪಾರಿಕ ಔಷಧೀಯ ಗಿಡಗಳ ಬಗ್ಗೆ ತರಬೇತಿ ನೀಡಲಾಗಿದೆ.

<u>ಡಿ.ಪಿ.ಇ.ಪಿ.</u>:- ಡಿ.ಪಿ.ಇ.ಪಿ. ಯೋಜನೆಯಲ್ಲಿ 5ದಿನಗಳು ಸಂಸ್ಥೆಯ ಎಲ್ಲಾ ಸಿಬ್ಬಂದಿಗಳಿಗೆ 5ದಿನಗಳು ಸೂಕ್ಷ್ಮಯೋಜನೆಯ ಬಗ್ಗೆ ತರಬೇತಿ ನೀಡಲಾಗಿರುತ್ತದೆ.

<u>ಸ್ವ-ಸಹಾಯ ಸಂಘಗಳ ಬಗ್ಗೆ</u>:- ಸಂಸ್ಥೆಯ ಯೋಜನಾಸಮನ್ವಯಾಧಿಕಾರಿಗಳಿಗೆ ಮಧುರೈನ ಡಾನ್‌ಫೌಂಡೇಷನ್‌ನಲ್ಲಿ 3ದಿನಗಳು ಸ್ವ-ಸಹಾಯ ಸಂಘದ ಬಗ್ಗೆ ತರಬೇತಿ ನೀಡಲಾಗಿದೆ.

<u>ಪರಿವೀಕ್ಷಣೆ ಮತ್ತು ಮೌಲ್ಯಮಾಪನ:-</u>

ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರು, ಸಂಸ್ಥೆಯ ಕಾರ್ಯಕರ್ತರು ವಿವಿಧ ಹಂತಗಳಲ್ಲಿ ಸಂಸ್ಥೆಯ ಕಾರ್ಯಕ್ರಮಗಳನ್ನು ಪರಿವೀಕ್ಷಣೆ ಮತ್ತು ಮೌಲ್ಯಮಾಪನ ಮಾಡುತ್ತಿದ್ದಾರೆ.

<u>ಸಂಸ್ಥೆಯ ಚಟುವಟಿಕೆಗಳಿಗೆ ಬೇಟಿ:-</u>

ಸಂಸ್ಥೆಯ ಕಾರ್ಯಚಟುವಟಿಕೆಗಳ ಬಗ್ಗೆ ಈ ಕೆಳಕಂಡವರು ಬೇಟಿ ನೀಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

(1) ಡಾ.ಎಂ.ನಾಗರಾಜು ''ಫ್ಲಿಂಟ್ ಮಿಚಿಗನ್ ಯು.ಎಸ್.ಎ. ಮತ್ತು ಕುಟುಂಬದವರು ಬೇಟಿನೀಡಿದ್ದರು.

(2) ಶ್ರೀಮತಿ ಸಾಯಿರಾಬಾನು, ಸಹಾಯಕ ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮೈಸೂರು.

(3) ಕೇಂದ್ರಸರ್ಕಾರದ ಮಹಿಳಾ ಮಕ್ಕಳ ಕಲ್ಯಾಣಾಧಿಕಾರಿಗಳು ಮತ್ತು ನಿಪ್ಸೀಡ್‌ನ ಅಧಿಕಾರಿಗಳು.

ಈ ಎಲ್ಲಾ ಕೆಲಸಗಳು ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರ ಸಲಹೆ ಸಹಕಾರ ಮತ್ತು ಮಾರ್ಗದರ್ಶನದಂತೆ ನಡೆಯುತ್ತಿದೆ ಎಂದು ತಿಳಿಸುತ್ತಾ ಈ ಸಮಗ್ರ ವರದಿಯನ್ನು ತಮ್ಮ ಮುಂದಿ ಮಂಡಿಸುತ್ತಿದ್ದೇವೆ.

ವಂದನೆಗಳೊಂದಿಗೆ,

ತಮ್ಮ ನಂಬುಗೆಯ,

(ಡಾ.ಎಚ್.ಸುದರ್ಶನ್ )
ಅಧ್ಯಕ್ಷರು
ಕರುಣಾಟ್ರಸ್ಟ್ ತಿ.ನರಸೀಪುರ.